ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ

ಸಿ.ಸಿ. ನಂಃ 155/2018

ಸಿ.ಡಬ್ಲ್ಯೂಃ 01
ಪಿ.ಡಬ್ಲ್ಯೂಃ 04

ಸಾಕ್ಷಿದಾರರ ಹೆಸರುಃ - ವೀರುಪಾಕ್ಷಪ್ಪ ಮಂಜುನಾಥ ಸುಲಸಂದಿ

ವಯಸ್ಸು - 29 ವರ್ಷ

ಉದ್ಯೋಗ - ಮೈಕಾನಿಕ್

ವಾಸಸ್ಥಳ - ತಿಮ್ಮಾಪುರ

ದಿನಾಂಕಃ 20-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ದೂರನ್ನು ತೋರಿಸಿದ್ದು ಅವರ ಸಹಿಯನ್ನು ಗುರುತಿಸಿದ್ದ ಮೇರೆಗೆ ಅದನ್ನು ನಿ.ಪಿ-6 ಎಂದು ಗುರುತಿಸಲಾಯಿತು ಹಾಗೂ ಅವರ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಫಿರ್ಯಾದಿಯನ್ನು ಕೊಡುವ ಕಾಲಕ್ಕೆ ನನ್ನ ಹೆಸರು ವಿರುಪಾಕ್ಷ ತಂದೆಃ ಮನೋಹರ ಕುಲಕರ್ಣಿ ಎಂದು ತಪ್ಪಾಗಿ ನಮೂದಾಗಿತು. ನನ್ನ ಹಸೆರು ವೀರುಪಾಕ್ಷ ತಂದೆಃ ಮಂಜುನಾಥ ಸುಲಸಂದಿ. ಸದರಿ ವಿಚಾರದ ಬಗ್ಗೆ ನಾನು ಪೋಲಿಸ ಠಣೆಯಲ್ಲಿ ಆಧಾರ ಕಾರ್ಡ ಕೊಟ್ಟಿದ್ದೇನೆ. ಈ ಆರೋಪಿ ಈ ದಿನ ಗೈರು ಹಾಜರಾಗಿದ್ದು ಆರೋಪಿತರ ಪರ ವಕೀಲರು ಅವರ ಗುರುತಿನ ಬಗ್ಗೆ ಯಾವುದೇ ತಕರಾರು ಮಾಡಿರುವುದಿಲ್ಲ. ಈ ಫಿರ್ಯಾದಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸ ಠಾಣೆಗೆ ಹೋದಾಗ ನನ್ನಿಂದ ಕೆಲವು ಕಾಗದಗಳಿಗೆ ಸಹಿ ಪಡೆದಿದ್ದರು. ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಮರು ಹೇಳಿಕೆ ನೀಡಿಲ್ಲ. ಸಾಕ್ಷಿಗೆ ನಿ.ಪಿ-1 ನ್ನು ತೋರಿಸಿದ್ದು ಅವರ ಸಹಿಯನ್ನು ಗುರುತಿಸಿದ ಮೇರೆಗೆ ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿ.ಪಿ-3 ಮತ್ತು 4 ನ್ನು ತೋರಿಸಿದ್ದು ಅವರನ್ನು ಅವರು ಗುರುತಿಸಿಕೊಳ್ಳುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮತ್ತು ಹಾತ್ ನಕಾಶೆಯನ್ನು ತಯಾರು ಮಾಡಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಮೇಲೆ ಹೇಳಿದ ವಿಳಾಸದಲ್ಲಿ ವಾಸವಾಗಿದ್ದು ..................................................................................................................... ............................................. ಕಾನೂನು ಕ್ರಮ ಕೈಗೊಳ್ಳಲು ವಿನಂತಿ.

ಈ ರೀತಿ ಫಿರ್ಯಾದಿಯನ್ನು ಪೋಲಿಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿ. 18.08.2017 ರಂದು ಮರು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಫಿರ್ಯಾದಿಯಲ್ಲಿ ಬರೆದ ವಿಷಯ ನಿಜವಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವನ್ನು ನೋಡಿದ್ದರೂ ಸಹಿತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 07.08.2017 ರಂದು ಮಧ್ಯಾಹ್ನ 01.00 ರಿಂದ 2.00 ಗಂಟೆವರೆಗೆ ನಿಮ್ಮ ಹಾಗೂ ಚಾಸಾ- 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ಹಾತ್ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಫೋಟೋಗಳನ್ನು ಆ ಕಾಲಕ್ಕೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ಬರೆದ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )**

**ಓ ಹೆ ಕೆ ಸರಿ ಅದೆ.**

**ಜೆ. ಎಂ. ಎಫ್. ಸಿ., ಶಿಗ್ಗಾಂವ.**